**ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಹೊನ್ನಾವರ ವಿಭಾಗ, ಹೊನ್ನಾವರ –581 334**

**OFFICE OF THE DEPUTY CONSERVATOR OF FORESTS, HONAVAR DIVISION, HONAVAR-581334**

**ದೂರವಾಣಿ:** 08387–220235 **ಫ್ಯಾಕ್ಸ** ನಂ. 08387–221170

ನಂ. ಎ2/ಬಜೆಟ್/ಟೆಂಡರ್/ವಿವ–2/2019–20 ಹೊನ್ನಾವರ ದಿನಾಂಕ: 22.07.2019

**2019–20 ನೇ ಸಾಲಿಗೆ ಹೊನ್ನಾವರ ಅರಣ್ಯ ವಿಭಾಗದ ಹೊನ್ನಾವರ ಮತ್ತು ಗೇರಸಪ್ಪಾ ವಲಯದಲ್ಲಿ ಅರಣ್ಯ ರಕ್ಷಕರ ವಸತಿಗೃಹ ನಿರ್ಮಾಣದ ಕುರಿತು ಕರೆಯಲಾದ ಇ–ಪ್ರೊಕ್ಯೂರಮೆಂಟ್ ಟೆಂಡರ**

ಸಾರ್ವಜನಿಕ ಅವಗಾಹನೆಗಾಗಿ ಈ ಮೂಲಕ ಪ್ರಕಟಿಸುವದೇನೆಂದರೆ, ಈ ಮುಂದೆ ಕಾಣಿಸಲಾದ ದಿನಾಂಕ ಮತ್ತು ವೇಳೆಯಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಹೊನ್ನಾವರ ವಿಭಾಗ, ಹೊನ್ನಾವರ ಇವರ ಕಚೇರಿಯಲ್ಲಿ ಅನುಬಂಧ–1 ರಲ್ಲಿ ವಿವರಿಸಿದಂತೆ 2019–20 ನೇ ಸಾಲಿಗೆ ಹೊನ್ನಾವರ ಮತ್ತು ಗೇರಸಪ್ಪಾ ವಲಯದಲ್ಲಿ ಅರಣ್ಯ ರಕ್ಷಕರ ವಸತಿಗೃಹ ನಿರ್ಮಾಣದ ಕಾಮಗಾರಿ ಕೆಲಸಕ್ಕೆ ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ ಟೆಂಡರು ಕರೆಯಲಾಗಿದೆ. ಆಸಕ್ತ ನೋಂದಾಯಿತ ಗುತ್ತಿಗೆದಾರರು ಟೆಂಡರಿನಲ್ಲಿ ಭಾಗವಹಿಸಬಹುದಾಗಿದೆ.

| | | |
|---|---|---|
| 1 | ಟೆಂಡರು ಸ್ಥಳ | ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಹೊನ್ನಾವರ ವಿಭಾಗ, ಹೊನ್ನಾವರ |
| 2 | ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ | 09.08.2019 ಮಧ್ಯಾಹ್ನ 3.00 ಗಂಟೆಗೆ |
| 3 | ತಾಂತ್ರಿಕ ಬಿಡ್ ತೆರೆಯುವ ದಿನಾಂಕ | 13.08.2019 ಮದ್ಯಾಹ್ನ 3.00 ಗಂಟೆಗೆ |
| 4 | ಆರ್ಥಿಕ ಬಿಡ್ ತೆರೆಯುವ ದಿನಾಂಕ | 14.08.2019 ಮದ್ಯಾಹ್ನ 3.30 ಗಂಟೆಗೆ |
| 5 | ಮರು ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ | 16.08.2019 ಮದ್ಯಾಹ್ನ 3.00 ಗಂಟೆಗೆ |
| 6 | ತಾಂತ್ರಿಕ ಬಿಡ್ ತೆರೆಯುವ ದಿನಾಂಕ | 17.08.2019 ಮದ್ಯಾಹ್ನ 3.00 ಗಂಟೆಗೆ |
| 7 | ಆರ್ಥಿಕ ಬಿಡ್ ತೆರೆಯುವ ದಿನಾಂಕ | 19.08.2019 ಮದ್ಯಾಹ್ನ 3.00 ಗಂಟೆಗೆ |
| 8 | ಟೆಂಡರ ವೆಬ್‌ಸೈಟ್ | https://www.eproc.karnataka.gov.in. |

**:ಟೆಂಡರುದಾರರು ಈ ಕೆಳಗಿನ ಅಂಶಗಳನ್ನು ಗಮನದಲ್ಲಿರಿಸಿಕೊಳ್ಳತಕ್ಕದ್ದು:**

1. ಗುತ್ತಿಗೆದಾರರಲ್ಲಿ ತಿಳಿಸುವದೇನೆಂದರೆ, ಸದರ ಟೆಂಡರಿಗೆ ಸಂಬಂಧಿಸಿದಂತೆ ಈ ಕೆಳಕಂಡ ದೃಢೀಕೃತ ದಾಖಲಾತಿಗಳನ್ನು ಅರ್ಜಿಗೆ ಲಗತ್ತಿಸಬೇಕು. ಅವುಗಳನ್ನು ಪರಿಶೀಲಿಸಿದ ನಂತರ ಟೆಂಡರ ಫಾರ್ಮನ್ನು ಕೊಡಲಾಗುವದು. ಒಂದಾನುವೇಳೆ ಅಪೂರ್ಣ ಮಾಹಿತಿ/ಕೆಳಕಂಡ ದಾಖಲಾತಿಗಳನ್ನು ಪೂರೈಸದೇ ಇದ್ದಲ್ಲಿ ಅಂತಹ ಅರ್ಜಿಯನ್ನು ಯಾವುದೇ ಮುನ್ಸೂಚನೆ ನೀಡದೇ ತಿರಸ್ಕರಿಸಲಾಗುವದು.
   ಅ) 2019–20 ನೇ ಸಾಲಿಗೆ ಈ ವಿಭಾಗದಲ್ಲಿ ಅರಣ್ಯ ಗುತ್ತಿಗೆದಾರರೆಂದು ನೋಂದಾಯಿಸಿದ ಪ್ರಮಾಣ ಪತ್ರ.
   ಆ) ಚಾಲ್ತಿಯಲ್ಲಿರುವ ಆದಾಯ ಕರ ಮತ್ತು ಜಿಎಸ್‌ಟಿ ಪ್ರಮಾಣ ಪತ್ರ.
   ಇ) ಅರಣ್ಯ ಇಲಾಖೆಯಲ್ಲಿ ಇಲ್ಲವೇ ಬೇರೆ ಇಲಾಖೆಯಲ್ಲಿ ಇತ್ತೀಚಿನ ಮೂರು ವರ್ಷಗಳಲ್ಲಿ ಕೈಗೊಂಡ ಸಮರ್ಪಕ ಕೆಲಸದ ಪ್ರಮಾಣ ಪತ್ರದೊಂದಿಗೆ ಟೆಂಡರಿನಲ್ಲಿ ಭಾಗವಹಿಸಬಹುದಾಗಿದೆ.

2. ಕಾಮಗಾರಿ ಕೆಲಸಕ್ಕೆ ಸಿದ್ಧಪಡಿಸಲಾದ ಅಂದಾಜು ಪತ್ರಿಕೆ ಮತ್ತು ನಕ್ಷೆಯು ಒಂದಾನುವೇಳೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಟೆಂಡರ ನಂತರ ಕರಾರು ಒಪ್ಪಂದದ ಪೂರ್ವದಲ್ಲಿ ನಕ್ಷೆ ಮತ್ತು ಅಂದಾಜು ಪತ್ರಿಕೆಯ ಕಾಮಗಾರಿಗಳಲ್ಲಿ ಬದಲಾವಣೆ ಮಾಡಿಕೊಂಡಲ್ಲಿ ಅದಕ್ಕೆ ತಕ್ಕಂತೆ ಯಶಸ್ವಿ ಟೆಂಡರುದಾರರು ಕಾಮಗಾರಿ ಕೆಲಸ ಕೈಗೊಳ್ಳಲು ಬದ್ಧರಿರತಕ್ಕದ್ದು ಮತ್ತು ಕಾಮಗಾರಿ ಸ್ಥಳ ಮತ್ತು ವಲಯ ಬದಲಾವಣೆಯಾದಲ್ಲಿ ಸಹ ಅಂದಾಜು ಪತ್ರಿಕೆಯ ಮಂಜೂರಾದ ಟೆಂಡರ ರಖಂನ ಮಿತಿಯೊಳಗೆ ಕಾಮಗಾರಿ ಕೈಗೊಳ್ಳಲು ಬದ್ಧರಿರತಕ್ಕದ್ದು.
3. ಟೆಂಡರ ಕಾಲಕ್ಕೆ 2.5% ಇಎಂಡಿ ಮತ್ತು ಕರಾರುನಾಮೆ ಕಾಲಕ್ಕೆ 5% ಭದ್ರತಾ ಠೇವಣಿಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಪದನಾಮದಲ್ಲಿ ಡಿಮಾಂಡ ಡ್ರಾಫ್ಟ ಮೂಲಕ ಸಲ್ಲಿಸುವುದು.
4. ಗುತ್ತಿಗೆ ಕಾಮಗಾರಿ ಕೈಗೊಳ್ಳುವ ವೇಳೆಯಲ್ಲಿ ಏನಾದರೂ ಬದಲಾವಣೆ/ಮಾರ್ಪಾಡು ಮಾಡುವುದು ಅವಶ್ಯವೆಂದು ಕಂಡು ಬಂದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ಹೊನ್ನಾವರ ಮತ್ತು ಅವರಿಂದ ಅಧಿಕಾರ ಪಡೆದ ಅಧಿಕಾರಿಗಳ ಸಲಹೆಯಂತೆ ಕೆಲಸ ಕೈಗೊಳ್ಳಲು ಬದ್ಧರಿರತಕ್ಕದ್ದು.
5. ಲೇಬರ ರೆಗ್ಯೂಲೇಶನ್ ಆಕ್ಟ್ ಕರ್ನಾಟಕ ಸರ್ಕಾರ GO No. PWD/206/BMD/60,ದಿನಾಂಕ:14–06–1962 ರ ನಿಯಮಾವಳಿಗೆ ಗುತ್ತಿಗೆದಾರರು ಬದ್ಧರಾಗಿರತಕ್ಕದ್ದು.
6. ಸದರ ಕೆಲಸಗಳಿಗೆ ಬೇಕಾಗುವ ಯಾವುದೇ ಸಾಮಗ್ರಿ ಮತ್ತು ಸಲಕರಣೆಗಳನ್ನು ಇಲಾಖೆಯಿಂದ ಗುತ್ತಿಗೆದಾರರಿಗೆ ನೀಡಲಾಗುತ್ತಿಲ್ಲ. ಗುತ್ತಿಗೆದಾರನು ಸ್ವತ: ಸಲಕರಣೆಯೊಂದಿಗೆ ಕೆಲಸ ನಿರ್ವಹಿಸಲು ಬದ್ಧರಿರತಕ್ಕದ್ದು.
7. ಕಾಮಗಾರಿ ಕೆಲಸದ ಯೂನಿಟ್‌ಗಳನ್ನು ಹೆಚ್ಚಿಗೆ ಅಥವಾ ಕಡಿಮೆ ಮಾಡುವ ಪೂರ್ತಿ ಅಧಿಕಾರವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಯವರು ಹೊಂದಿರುವರು ಮತ್ತು ಅನುಬಂಧ–1 ರಲ್ಲಿ ನಮೂದಿಸಲಾದ ಕಾಮಗಾರಿ ಕೆಲಸಗಳಲ್ಲಿ ಕೆಲವೊಂದು ಕೆಲಸಗಳ ಕ್ಷೇತ್ರಗಳು ಬದಲಾವಣೆಯಾಗುವ ಸಾಧ್ಯತೆ ಇರುವದರಿಂದ ಬದಲಾವಣೆಯಾದ ವಲಯ ಮತ್ತು ಆಯಾ ಕ್ಷೇತ್ರಗಳಲ್ಲಿ ಕೆಲಸ ಕೈಕೊಳ್ಳಲು ಬದ್ಧರಿರಬೇಕು. ಹಾಗೂ ಅನುಬಂಧ–1 ರಲ್ಲಿ ಘಟಕವಾರು ಸೂಚಿಸಲಾದ ಕೆಲಸಗಳ ರಕಂ ಅಂದಾಜಿನದಾಗಿದ್ದು ಅವುಗಳನ್ನು ಮೇಲಾಧಿಕಾರಿಗಳ ಅನುದಾನ ಬಿಡುಗಡೆ ಆಧರಿಸಿ ಕಾಮಗಾರಿಗಳನ್ನು ಕೈಕೊಳ್ಳಲಾಗುವದು. ಈ ಕಾಮಗಾರಿಗಳಿಗೆ ಅವಧಿ ವಿಸ್ತರಿಸಿ ಕೊಡಲಾಗದು.
8. ಟೆಂಡರ ಕೆಲಸಕ್ಕಾಗಿ ಯಾವುದೇ ಮುಂಗಡ ಹಣವನ್ನು ಪಾವತಿಸಲಾಗುತ್ತಿಲ್ಲ. ಸರ್ಕಾರದಿಂದ ಬಿಡುಗಡೆಯಾದ ಅನುದಾನ ಆಧರಿಸಿ ಹಣ ಪಾವತಿಸಲು ಕ್ರಮ ಕೈಗೊಳ್ಳಲಾಗುವುದು.
9. ಒಂದು ವೇಳೆ ಮೇಲೆ ತಿಳಿಸಿದ ದಿನಾಂಕಗಳು ರಜಾ ದಿನಗಳಾಗಿದ್ದಲ್ಲಿ ಮುಂದಿನ ಕೆಲಸ ದಿನವನ್ನು ಗಣನೆಗೆ ತೆಗೆದುಕೊಳ್ಳಲಾಗುವದು.
10. ಭಾಗಶ: ಟೆಂಡರ ಅಥವಾ ಎಲ್ಲಾ ಟೆಂಡರುಗಳನ್ನು ಯಾವುದೇ ಕಾರಣ ಕೊಡದೇ ಮಂಜೂರು ಮಾಡುವ ಅಥವಾ ನಿರಾಕರಿಸುವ ಹಾಗೂ ಮರು ಟೆಂಡರ ಕೈಕೊಳ್ಳುವ ಅಧಿಕಾರವನ್ನು ಅಧಿಕಾರಸ್ಥ ಅಧಿಕಾರಿಯು ಕಾಯ್ದಿರಿಸುತ್ತಾರೆ.

11. ಈ ಮೇಲಿನಂತೆ ಕಾಮಗಾರಿಗಳನ್ನು ಮಾನ್ಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಕೆನರಾ ವೃತ್ತ, ಶಿರಸಿ ಇವರು ಅನುಮೋದಿಸಲ್ಪಡುವ ಕ್ರಿಯಾಯೋಜನೆಗೆ ಒಳಪಟ್ಟು ಕಾಮಗಾರಿಗಳನ್ನು ಕೈಗೊಳ್ಳಲು ಬದ್ಧರಾಗಿರತಕ್ಕದ್ದು ಮತ್ತು ಗುತ್ತಿಗೆ ಕೆಲಸವನ್ನು ದಿನಾಂಕ: 31.12.2019 ರ ಒಳಗಾಗಿ ಮುಗಿಸಿಕೊಡಲು ಬದ್ಧರಾಗಿರಬೇಕು.

12. ಸದರ ಟೆಂಡರಿನಲ್ಲಿ ಭಾಗವಹಿಸುವ ಗುತ್ತಿಗೆದಾರರು 2015 19 ನೇ ಸಾಲಿಗೆ ಈ ವಿಭಾಗದಲ್ಲಿ ಟೆಂಡರ ಕಾಮಗಾರಿ ಕೆಲಸ ಪಡೆದುಕೊಂಡು ಕಾಮಗಾರಿ ನಿರ್ವಹಿಸಿದಲ್ಲಿ ಅವುಗಳ ಸಮಾಧಾನ ವರದಿಯೊಂದಿಗೆ ಇಎಂಡಿ ಹಣವನ್ನು ವಾಪಸು ಪಡೆದುಕೊಂಡಿರುವ ಪ್ರತಿಯೊಂದಿಗೆ ಸದರ ಟೆಂಡರಿಗೆ ಲಗತ್ತಿಸುವುದು ಕಡ್ಡಾಯವಾಗಿರುತ್ತದೆ.

13. ಹೆಚ್ಚಿನ ವಿವರವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ಹೊನ್ನಾವರ ವಿಭಾಗ, ಹೊನ್ನಾವರ ಇವರ ಕಚೇರಿಯ ವೇಳೆಯಲ್ಲಿ ಹಾಗೂ https://www.eproc.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿದೆ.

(ಗಣಪತಿ ಕೆ., ಭಾ.ಅ.ಸೇ)
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಹೊನ್ನಾವರ ವಿಭಾಗ, ಹೊನ್ನಾವರ

# Annexure-I

## E-Procurement tender for Construction of Guard quarters during 2019-20.

| Unit.no. | Range | SC/ST Reservation | Details of works. | Location | Estimated amount Rs.in lakhs | EMD amount 2.5% | Security Deposit deposit 5% | Tender form rate [illegible] | Contract period |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 |
| | Budget-Head: CAMPA. | | | | | | | | |
| | Details of Works: Construction of Beat Guard quarters during 2019-20. | | | | | | | | |
| 1 | Honnavar | | Construction of Guard Quarters at Tulsani during 2019-20 | Tulsani | 12.700 | 0.3175 | 0.6350 | 500 | 31-12-2019 |
| 2 | Gersoppa | | Construction of Guard Quarters at Nagar bastikeri during 2019-20. | Nagarbastikeri | 12.700 | 0.3175 | 0.6350 | 500 | 31-12-2019 |

(GANAPATI K IFS)
Deputy Conservator of Forests
Honnavar Division Honnavar